ಪಿ. ಡಬ್ಲ್ಯೂ:1

**ಸಾಕ್ಷಿಗೆ ದಿನಾಂಕ 07.03.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ ಎದುರುದಾರರ ಪರ ವಕೀಲರಿಂದಃ**

ಅಸಲು ದಾವೆ 276/2012 ನ್ನು ದಿಃ07.08.2012 ರಂದು ಸಲ್ಲಿಸಿರುತ್ತೇನೆ ಎಂದರೆ ಸರಿ. ದಿಃ06.04.2018 ರಿಂದ ದಾವೆ ವಜಾಗೊಳ್ಳುವವರೆಗೂ ನಾನು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. ದಿಃ27.06.2018 ರಂದು ನಾನು ಆಸ್ಪತ್ರೆಯಲ್ಲಿ ದಾಖಲಾಗಿರಲಿಲ್ಲ. ದಿಃ27.06.2018 ರಂದು ನಾನು ನ್ಯಾಯಾಲಯಕ್ಕೆ ಹಾಜರಾಗದಿದ್ದರು ಸಹ ಮಾನ್ಯ ನ್ಯಾಯಾಲಯ ಖರ್ಚಿನೊಂದಿಗೆ ನನ್ನ ದಾವೆಯನ್ನು ಮುಂದೂಡಿರುತ್ತಾರೆ ಎಂದರೆ ಸರಿ. ನಾನು ನ್ಯಾಯಾಲಯಕ್ಕೆ ಎಲ್ಲಾ ಸುನಾವಣಾ ದಿನಾಂಕಗಳಲ್ಲಿ ಹಾಜರಾಗದೆ ಇರುವುದರಿಂದ ಆಗಾಗಿ ನ್ಯಾಯಾಲಯ ದಾವೆಯನ್ನು ವಜಾ ಮಾಡಿರುತ್ತದೆ ಎಂದರೆ ಸರಿಯಲ್ಲ ನಾನು ಪ್ರತಿ ದಿನಾಂಕದಂದು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ದಿಃ15.03.2019 ರಂದು ಬೆಳಗ್ಗಿನ ಸಮಯದಲ್ಲಿ ನ್ಯಾಯಾಲಯ ನನ್ನ ದಾವೆಯನ್ನು ಕೂಗಿಸಿ ನಾನು ಬರದೇ ಇದ್ದಾಗ ದಾವೆಯನ್ನು ಮ.3.00 ಗಂಟೆಗೆ ಮುಂದೂಡಲಾಗಿತ್ತು ಎಂದರೆ ಸರಿ. ದಿಃ15.03.2019 ರಂದು ನಾನು ಹಾಗೂ ನನ್ನ ವಕೀಲರು ಗೈರು ಹಾಜರಾಗಿದ್ದು ಸದರಿ ವಿಚಾರವನ್ನು ಆದೇಶ ಪುಟದಲ್ಲಿ ನಮೂದಿಸಿ ನನ್ನ ದಾವೆಯನ್ನು ನ್ಯಾಯಾಲಯ ವಜಾ ಮಾಡಿರುತ್ತದೆ ಎಂದರೆ ಸರಿಯಲ್ಲ. ಅಸಲು ದಾವೆಯನ್ನು ನಡೆಸಲು ನನಗೆ ಆಸಕ್ತಿ ಇಲ್ಲದೇ ಇರುವುದರಿಂದ ನಾನು ನಿರಂತರವಾಗಿ ನ್ಯಾಯಾಲಯಕ್ಕೆ ಗೈರು ಹಾಜರಾಗಿದ್ದು ಸದರಿ ಎಲ್ಲಾ ವಿಚಾರಗಳನ್ನು ನಮೂದಿಸಿ ನನ್ನ ದಾವೆಯನ್ನು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಅನರೋಗ್ಯ ಇದ್ದಿದ್ದರಿಂದ ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದು ವೈಧ್ಯಕೀಯ ಪ್ರಮಾಣ ಪತ್ರವನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಾನು ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡ ಬಗ್ಗೆ ನಿಪಿ-1 ರ ದಾಖಲಯನ್ನು ಹಾಜರುಪಡಿಸಿರುತ್ತೇನೆ ಅದನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆ

ಇಲ್ಲ. ನಿಪಿ-1 ರ ದಾಖಲೆಯನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ನ್ಯಾಯಾಲಯಕ್ಕೆ ಹಾಜರಾಗದೇ ಇರುವುದರಿಂದ ನನ್ನ ದಾವೆ ವಜಾ ಆಗಿರುತ್ತದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.**

**ಓ.ಹೇ.ಕೇ.ಸರಿ ಇದೆ**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಧೀಶರು, ಹುಣಸೂರು.**